ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

ಸಿ ಸಿ ನಂ. **238/2022**

ದಿಃ **25-02-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | | | |
|---|---|---|---|
| ಹೆಸರು | ಆದಿನಾರಾಯಣ | ಸಿ.ಡಬ್ಲ್ಯು | **04** |
| ವಯಸ್ಸು | 52 ವರ್ಷ | ಪಿ.ಡಬ್ಲ್ಯು: | **04** |
| ತಂದೆಯ / ಗಂಡನ ಹೆಸರು | ಚೌಡಪ್ಪ | | |
| ವೃತ್ತಿ | ಕೂಲಿ ಕೆಲಸ | | |
| ವಾಸಸ್ಥಳ | ಬೀರಮಂಗಲ ಗ್ರಾಮ ಗೌರಿಬಿದನೂರು ತಾಲ್ಲೂಕು | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಯು ನಿಪಿ -2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2 (ಸಿ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿದೆ. ದಿನಾಂಕ 24.09.2021 ರಂದು ಮಧುಗಿರಿ ವೃತ್ತದ ಬಳಿ ಇರುವ ಆಟೋ ನಿಲ್ದಾಣಕ್ಕೆ ಪೋಲೀಸರು ಬಂದು ಪಂಚರಾಗಿ ಸಹಕರಿಸಲು ನನಗೆ ನೋಟೀಸನ್ನು ನೀಡಿದರು. ಸಾಕ್ಷಿಯು ದಿನಾಂಕ 24.09.2021 ರ ನೋಟೀಸನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ನೋಟೀಸನ್ನು ನಿಪಿ-3 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ನಿಪಿ-2 ಅನ್ನು ಕೈಗೊಂಡಾಗ ನನ್ನೊಂದಿಗೆ ಚಾಸಾ-1 ರವರು ಮತ್ತು ವೆಂಕಟೇಶರ್ ರವರು ಇದ್ದರು. ಪೋಲೀಸರು ನನ್ನ ಸಮಕ್ಷಮ ಚಾಸಾ-1 ರವರು ಸ್ಥಳದಲ್ಲಿ ತೋರಿಸಿದ ಚಾಕುವನ್ನು ವಶಕ್ಕೆ ಪಡೆದುಕೊಂಡರು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು -1 ರ ಚಾಕುವನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-2 ರ ಕ್ರಮವನ್ನು ಆ ದಿನ ಬೆಳಗ್ಗೆ 8.30 ರಿಂದ 9.30 ರ ಸಮಯದಲ್ಲಿ ಕೈಗೊಂಡರು. ನಿಪಿ-2 ಕ್ಕೆ ನಾನು ಸ್ಥಳದಲ್ಲೇ ಸಹಿ ಮಾಡಿರುತ್ತೇನೆ. ಆ ದಿನ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು.)

ನಿಪಿ-2 ಅನ್ನು ಬರೆದಾಗ ನನ್ನೊಂದಿಗೆ ಚಾಸಾ-1 ಮತ್ತು ಚಾಸಾ-2 ರವರು ಇದ್ದರು ಎಂದರೆ ಸರಿ. ಪೋಲೀಸರಿಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಆರ್.ವಿ.ಜಿ . ರವರಿಂದಃ

ಚಾಸಾ-1 ರವರು ನನಗೆ ಪರಿಚಯ ಇರುವುದಿಲ್ಲ. ಆ ದಿನ ನೀವು ಮಧುಗಿರಿ ವೃತ್ತದಿಂದ ಕೂಲಿ ಕೆಲಸಕ್ಕಾಗಿ ಎಲ್ಲಿಗೆ ಹೋಗುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಆ ದಿನ ಎಲ್ಲಿ ಕೆಲಸ ಸಿಗುತ್ತದೆಯೋ ಅಲ್ಲಿಗೆ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ನಿಪಿ-3 ರ ನೋಟೀಸನ್ನು ದಿನಾಂಕ 24.09.2021 ರಂದು ಬೆಳಗ್ಗೆ 8.30 ರಿಂದ 9.00 ಗಂಟೆಯ ಮಧ್ಯದಲ್ಲಿ ನೀಡಿರುತ್ತಾರೆ. ನನ್ನ ಜೊತೆ ಬೇರೆ ಯಾರಿಗಾದರೂ ಪೋಲೀಸರು ನೋಟೀಸನ್ನು ನೀಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಮ್ಮೊಂದಿಗೆ ನಿಪಿ-2 ಕ್ಕೆ ಬೇರೆ ಯಾರಾದರೂ ಸಹಿ ಮಾಡಿದರೇ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಸಹಿ ಮಾಡಿದೆನು ಆದರೆ ಇತರರು ಸಹಿ ಮಾಡಿದ್ದನ್ನು ನಾನು ನೋಡಲಿಲ್ಲ ಎಂದು ನುಡಿಯುತ್ತಾರೆ. ನಾನು ದಾಖಲೆಗೆ ಸಹಿ ಮಾಡಿದ ಸ್ಥಳದ ಚೆಕ್ಕುಬಂದಿ ಪೂ. ಕಾಂಪೌಂಡ್, ಪಶ್ಚಿಮಕ್ಕೆ ಬೇಕರಿ, ಉತ್ತರಕ್ಕೆ ಮಧುಗಿರಿ ರಸ್ತೆ ಹಾಗೂ ದಕ್ಷಿಣಕ್ಕೆ ಯಾವ ರಸ್ತೆ ಇತ್ತು ಎಂಬುದು ನನಗೆ ನೆನಪಿಲ್ಲ. ಸಾಮಾನ್ಯವಾಗಿ ನಾನು ಕೂಲಿ ಕೆಲಸಕ್ಕಾಗಿ ಮನೆಯಿಂದ ಬೆಳಗ್ಗೆ 8.00 ಗಂಟೆಗೆ ಹೊರಡುತ್ತೇನೆ. ನಿಪಿ-2 ರಲ್ಲಿ ಬರೆದಿರುವುದನ್ನು ನೀವು ಓದಿರುವಿರಾ ಅಥವಾ ನಿಮಗೆ ಓದಿ ತಿಳಿಸಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಆ ದಿನ ನಾನು ಆ ಸ್ಥಳದಲ್ಲೇ ನಿಂತು ನೋಡುತ್ತಿದ್ದೆನು ಹಾಗೂ ಪೋಲೀಸರು ದಾಖಲೆಗೆ ಸಹಿ ಮಾಡಿ ಎಂದು ನನ್ನನ್ನು ಕೇಳಿದಾಗ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನೊಂದಿಗೆ ಆ ದಿನ ಮತ್ತು ಸಮಯದಲ್ಲಿ ಬೇರೆ ಯಾರೂ ನಿಪಿ-2 ಕ್ಕೆ ಸಹಿ ಮಾಡಿರುವುದಿಲ್ಲ. ಮುದ್ದೆ ಮಾಲು 1 ರ ಮಾದರಿಯ ಚಾಕುಗಳು ಸಾಮಾನ್ಯವಾಗಿ ಗುಜರಿ ಅಂಗಡಿಗಳಲ್ಲಿ

ಸಿಗುತ್ತದೆ ಎಂದರೆ ಸರಿ. ಆರೋಪಿಗಳಿಗೆ ತೊಂದರೆ ಆಗಲಿ ಎಂದು ಚಾಸಾ-1 ರವರು ಮುದ್ದೆ ಮಾಲು 1 ಅನ್ನು ಗುಜರಿ ಅಂಗಡಿಯಿಂದ ತೆಗೆದುಕೊಂಡು ಬಂದು ಪೋಲೀಸರಿಗೆ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ಚಾಸಾ-1 ರವರು ನನಗೆ ಪರಿಚಯವಿರುವ ಕಾರಣ ಅವರಿಗೆ ಸಹಾಯ ಮಾಡಲು ಮತ್ತು ಆರೋಪಿಗಳಿಗೆ ತೊಂದರೆ ನೀಡಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಯಾವುದೇ ಕೂಲಿ ಕೆಲಸಕ್ಕೆ ಹೋಗಿರುವುದಿಲ್ಲ ಹಾಗೂ ಚಾಸಾ-1 ರವರೇ ನನ್ನನ್ನು ಪೋಲೀಸರ ಬಳಿ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ನಿಪಿ-2 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

P.M Sachin
Digitally signed by P.M Sachin
Date: 2025.02.27 10:44:49 +0530

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು